ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 39-49
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಆರ್ಥಿಕ ದುರ್ಬಲ ವರ್ಗಗಳ ಮೀಸಲಾತಿ ಮತ್ತು ದಲಿತರ ಸವಾಲುಗಳು

**ಡಾ.ಸಂಜೀವಕುಮಾರ ಮು.ಪೋತೆ**
ಅರ್ಥಶಾಸ್ತ್ರ ಸಹಾಯಕ ಪ್ರಾಧ್ಯಾಪಕರು, ಶ್ರೀಮತಿ ಕೋಟೆ ಬೋರಮ್ಮ ಪ್ರಥಮ ದರ್ಜೆ ಕಾಲೇಜು, ರಹೀಂಮ ನಗರ, ಎ.ಜೆ ರೋಡ ಚಳ್ಳಕೆರೆ, ಚಿತ್ರದುರ್ಗ(ಜಿಲ್ಲೆ), ಕರ್ನಾಟಕ

***Abstract:***
*ಭಾರತ ದೇಶದಲ್ಲಿ ಜಾತಿವ್ಯವಸ್ಥೆಯು ಪ್ರಾಧಾನ್ಯತೆ ಪಡೆದಿದೆ. ಇಲ್ಲಿ ಅನೇಕ ಜಾತಿಗಳಿದ್ದು, ತಾರತಮ್ಯ ಮತ್ತು ಅಸ್ಪೃಶ್ಯತೆ ಅನುಭವಿಸುವ ಜನಸಮುದಾಯಗಳು ಇವೆ. ಭಾರತದ ಮಾನವಶಾಸ್ತ್ರ ಸರ್ವೇಕ್ಷಣ ಇಲಾಖೆಯ ಪ್ರಕಾರ 4635ಕ್ಕಿಂತ ಹೆಚ್ಚು ಜಾತಿ ಮತ್ತು ಉಪಜಾತಿಗಳು ಕಂಡುಬರುತ್ತವೆ. ಜಾತಿ–ಜಾತಿಗಳ, ಜಾತಿ–ವಿಜಾತಿಗಳ ಮಧ್ಯೆ ರಕ್ತ ಸಂಬಂಧವನ್ನು ಮಿಳಿತಿಸುವಂತಿಲ್ಲ ಹಾಗೂ ಸಹಪಂಕ್ತಿಯ ಭೋಜನ ನಿಷೇಧಿಸಲಾಗಿದೆ. ಇನ್ನೂ ಮುಂದುವರೆದು ಹೇಳುವುದಾದರೆ, ಸ್ಮಶಾನಗಳು ಸಹ ಬೇರೆ ಬೇರೆಯಾಗಿ ನಿರ್ಮಿತಗೊಂಡಿರುವುದು ಸಾಕ್ಷಿಯಾಗುತ್ತದೆ. ಜಾತಿವ್ಯವಸ್ಥೆಯು ತಾರತಮ್ಯದಂಥ ಕೃತ್ಯಗಳ ಜೊತೆಗೆ ಮೂಲಭೂತ ಹಕ್ಕುಗಳನ್ನು ಸಹ ವ್ಯತ್ಯಾಸಗೊಳಿಸಿದೆ. ಈ ಲೇಖನವು ಆರ್ಥಿಕ ಹಿಂದುಳಿದವರಿಗೆ ನೀಡಿದ ಮೀಸಲಾತಿಯನ್ನು ಕುರಿತು ಚರ್ಚಿಸುವುದರೊಂದಿಗೆ ದಲಿತರಿಗೆ ನೀಡಿದ ಮೀಸಲಾತಿಯ ಮೇಲಾಗುವ ಪರಿಣಾಮವನ್ನು ಅವಲೋಕಿಸುತ್ತದೆ. ಈ ಲೇಖನಕ್ಕೆ ಆನುಷಂಗಿಕ ಮಾಹಿತಿ ಮೂಲಗಳನ್ನು ಬಳಸಿಕೊಳ್ಳಲಾಗಿದೆ.*

***Keywords:*** *ಅಸ್ಪೃಶ್ಯತೆ, ಅಸಮಾನತೆ, ಮೀಸಲಾತಿ, ದಲಿತರು, ಆರ್ಥಿಕ ದುರ್ಬಲ ವರ್ಗಗಳು, ಸಂವಿಧಾನ.*

**ಪೀಠಿಕೆ**

ಭಾರತೀಯ ಸಮಾಜದಲ್ಲಿ ತಳ ಸಮುದಾಯ ಗಳಿಗೆ ಹೋಲಿಸಿದಾಗ ಸವರ್ಣೀಯರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕುಗಳನ್ನು ಹೆಚ್ಚು ಗಿಟ್ಟಿಸಿಕೊಂಡಿದ್ದಾರೆ. ದೇಶದ ಜನರನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂದು ನಾಲ್ಕು ವರ್ಗಗಳನ್ನಾಗಿ ವಿಂಗಡಿಸಿದ್ದಾರೆ. ಈ ನಾಲ್ಕು ವರ್ಣಗಳಿಗೆ ಒಂದೊಂದು ಉದ್ಯೋಗವನ್ನು ಹಂಚುವುದರೊಂದಿಗೆ, ಶೂದ್ರರಿಗೆ ಮಾತ್ರ ಮೂರು ವರ್ಣಗಳ ಸೇವೆಯನ್ನು ಮಾಡುವುದೇ ಕಾಯಕ ಎಂದು ಒಪ್ಪಿಸಿ ಶೋಷಣೆ ಮಾಡಿದ್ದಾರೆ. ಈ ಚಾತುರ್ವರ್ಣದಿಂದ ಹೊರಗಿರುವವರನ್ನು ಅಸ್ಪೃಶ್ಯರೆಂದು ರೂಢಿಸಿದ್ದಾರೆ. ಸವರ್ಣೀಯರು ಮನುಸ್ಮೃತಿಯಂಥಹ ಧಾರ್ಮಿಕ ಗ್ರಂಥಗಳಲ್ಲಿ ಕೆಳಜಾತಿ ಸಮುದಾಯಗಳ ಹಕ್ಕುಗಳನ್ನು ವಿಭಿನ್ನ ನೆಲೆಗಳಲ್ಲಿ ಸ್ಥಾಪಿಸಿದ್ದಾರೆ. ಇವುಗಳಲ್ಲಿ ಸೃಷ್ಟಿಸಿರುವ ಆಚರಣೆಗಳ ಮೂಲಕ ಸಾವಿರಾರು ವರ್ಷಗಳ ಕಾಲ ಅಸ್ಪೃಶ್ಯರ ಇಡೀ ಬದುಕನ್ನೇ ನಾಶಮಾಡಿದ್ದಾರೆ.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಇದನ್ನೆಲ್ಲಾ ಸಂಶೋಧನೆ ಕೈಗೊಂಡು, ಶೋಷಿತ ವರ್ಗಗಳು ಘನತೆಯ ಜೀವನವನ್ನು ಸಾಧಿಸುವುದಕ್ಕೆ ವಿಶೇಷ ಪ್ರಾತಿನಿಧ್ಯ ಅವಶ್ಯಕತೆ ಇದೆ ಎಂದು ಅರಿತರು. ಆದ್ದರಿಂದ ಹಿಂದುಳಿದ ಸಮುದಾಯಗಳಿಗೆ

***Please cite this article as:*** ಸಂಜೀವಕುಮಾರ ಮು.ಪೋತೆ. (2023). ಆರ್ಥಿಕ ದುರ್ಬಲ ವರ್ಗಗಳ ಮೀಸಲಾತಿ ಮತ್ತು ದಲಿತರ ಸವಾಲುಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(4), 39–49.

ಮೀಸಲಾತಿಯನ್ನು ನೀಡಿದ್ದು ಇತಿಹಾಸ. ಮೀಸಲಾತಿಯು ಶೋಷಿತ ವರ್ಗಗಳು ಘನತೆಯ ಜೀವನವನ್ನು ಕಟ್ಟಿಕೊಳ್ಳುವುದಕ್ಕೆ ಮತ್ತು ಸಮಾಜದಲ್ಲಿ ಸಮಾನವಾದ ಬದುಕನ್ನು ನಿರ್ಮಿಸಿಕೊಳ್ಳುವುದಕ್ಕೆ ಅವಕಾಶವನ್ನು ನೀಡುತ್ತದೆ ಎಂದು ಡಾ.ಅಂಬೇಡ್ಕರ್ ಅವರು ನಂಬಿದ್ದರು. ಸಾಮಾಜಿಕ ಶೋಷಣೆಯನ್ನು ಅನುಭವಿಸಿದ್ದಕ್ಕಾಗಿ ದಲಿತರು ಮೀಸಲಾತಿಯನ್ನು ಪಡೆದುಕೊಂಡಿದ್ದಾರೆ ಎನ್ನುವುದು ಇಲ್ಲಿ ಸ್ಪಷ್ಟಪಡಿಸಬಹುದು. ಆದರೆ ಪ್ರಸ್ತುತದಲ್ಲಿ ಆರ್ಥಿಕ ದುರ್ಬಲತೆಯ ಆಧಾರದ ಮೇಲೆ ಮೀಸಲಾತಿ ಪಡೆದುಕೊಳ್ಳುತ್ತಿರುವುದು ವಿಷಾದನೀಯ. ಸಾಮಾಜಿಕ ಶೋಷಣೆ ಮತ್ತು ಆರ್ಥಿಕ ಶೋಷಣೆ ತುಂಬಾ ಭಿನ್ನವಾದ ವಿಷಯ ವಸ್ತುಗಳಾಗಿವೆ. ಆರ್ಥಿಕ ದುರ್ಬಲತೆಯನ್ನು ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಪರಿಹಾರವನ್ನು ಕಂಡುಕೊಳ್ಳಬಹುದು. ಆದರೆ ಸಾಮಾಜಿಕ ಪರಿವರ್ತನೆ ಇಡೀ ಸಮಾಜದ ಬದಲಾವಣೆಯನ್ನು ಬಯಸುತ್ತದೆ. ಆದರೆ ಒಮ್ಮಿಂದೊಮ್ಮೆಲೆ ಸಮಾಜ ಪರಿವರ್ತನೆಗೊಳ್ಳುವುದು ಕಷ್ಟಕರ. ಈ ಲೇಖನವು ದ್ವಿತೀಯ ಅಂಕಿ–ಸಂಖ್ಯೆಗಳ ಮೇಲೆ ಅವಲಂಬಿತವಾಗಿದೆ ಮತ್ತು ಹಲವಾರು ಗ್ರಂಥಗಳು, ಲೇಖನಗಳು ಹಾಗೂ ಪತ್ರಿಕೆಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.ದಲಿತರ ಅಭಿವೃದ್ಧಿಗೆ ಸಲಹೆಯನ್ನು ನೀಡುವುದು ಲೇಖನದ ಉದ್ದೇಶವಾಗಿದೆ.

**ಉದ್ದೇಶಗಳು ಮತ್ತು ಅಧ್ಯಯನದ ವಿಧಾನ**

ಈ ಲೇಖನದ ಮುಖ್ಯ ಉದ್ದೇಶಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಕಾರಣಕ್ಕಾಗಿಯೇ ಕೆಲವು ಮೀಸಲಾತಿ ನೀಡಲಾಗಿತ್ತು. ಆದರೆ ಆರ್ಥಿಕ ದುರ್ಬಲ ವರ್ಗಗಳ ಮೀಸಲಾತಿಯು ಆರ್ಥಿಕ ಸ್ಥಿತಿಯನ್ನಾಧರಿಸಿ ನೀಡಲಾಗಿದೆ. ಆರ್ಥಿಕ ಆಧಾರದ ಮೀಸಲಾತಿಯು ಅವೈಜ್ಞಾನಿಕವಾಗಿದೆ. ಏಕೆಂದರೆ ಮೀಸಲಾತಿಯು ಬಡತನ ನಿರ್ಮೂಲನ ಕಾರ್ಯಕ್ರಮವವಲ್ಲ; ಸಾಮಾಜಿಕ ಶೋಷಿತ ಸಮುದಾಯಗಳು ಸಮಾಜದಲ್ಲಿ ಘನತೆಯ ಬದುಕನ್ನು ಕಟ್ಟಿಕೊಳ್ಳುವುದಕ್ಕಾಗಿ ಮೀಸಲಾತಿಯನ್ನು ನೀಡಲಾಗಿದೆ. ಆದ್ದರಿಂದ ಆರ್ಥಿಕ ಆಧಾರದ ಮೀಸಲಾತಿಯು ಮೂಲಭೂತ ಮೀಸಲಾತಿಯ ಆಶಯಕ್ಕೆ ವಿರುದ್ಧವಾಗಿದೆ ಮತ್ತು ಸಂವಿಧಾನ ಆಶಯಕ್ಕೆ ವಿರೋಧವಾಗಿದೆ ಎನ್ನುವುದನ್ನು ಲೇಖನವು ಸ್ಪಷ್ಟಪಡಿಸುತ್ತದೆ.

**ಮೀಸಲಾತಿಯ ಹಿನ್ನಲೆ**

ಮೀಸಲಾತಿ ಎಂದರೆ? "ಶೋಷಿತ ಸಮುದಾಯಗಳು ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಭೌದ್ಧಿಕವಾಗಿ ಶತಶತಮಾನಗಳಿಂದ ಶೋಷಣೆಗೆ ಒಳಗಾಗಿ, ಸೌಲಭ್ಯಗಳಿಂದ ವಂಚಿತವಾಗಿದ್ದು, ಅವರನ್ನು ಕೆಳಸ್ತರದಿಂದ ಮೇಲೆತ್ತಲು ಸಂವಿಧಾನಾತ್ಮಕವಾಗಿ ನೀಡಿದ ವಿಶೇಷ ಸೌಲಭ್ಯಗಳೇ ಮೀಸಲಾತಿ" ಎಂದು ನಿರ್ವಚಿಸಬಹುದು. ಮೀಸಲಾತಿಯ ಉದ್ದೇಶ ಸಮಾನತೆಯ ಮೇಲೆ ದೇಶ ನಿರ್ಮಿಸಿ, ಬಹುಸಂಖ್ಯಾತರನ್ನು ಸಮಾನತೆಯ ಪರದೆಯ ಮೇಲೆ ನಿಲ್ಲಿಸುವುದಾಗಿದೆ. ದೇಶದಲ್ಲಿ ಮೀಸಲಾತಿಯನ್ನು ಮಹಾತ್ಮ ಜ್ಯೋತಿಬಾ ಫುಲೆ ಅವರ ಪ್ರಭಾವದಿಂದ ದಲಿತರಿಗೆ ಪ್ರಥಮವಾಗಿ ನೀಡಲಾಯಿತು. ಅದರ ಕುರುಹಾಗಿ ಕೊಲ್ಲಾಪುರದ ಛತ್ರಪತಿ ಶಾಹೂಮಹಾರಾಜರು ತಮ್ಮ ಪ್ರಾಂತ್ಯದಲ್ಲಿ ಸಾಮಾಜಿಕ ಸಮಾನತೆಗಾಗಿ ದಲಿತರಿಗೆ ಪ್ರತ್ಯೇಕವಾಗಿ ಶೇ.50ರಷ್ಟು ಮೀಸಲಾತಿಯನ್ನು ಜುಲೈ 26, 1902ರ ಕೊಲ್ಲಾಪುರದ ಗೆಜೆಟ್‌ನಲ್ಲಿ ಆದೇಶಿಸಿದ್ದನ್ನು ಗಮನಿಸಬಹುದು. ಹಾಗೆಯೇ 1911ರಲ್ಲಿ ವಿಶೇಷ ಆದೇಶವೊಂದನ್ನು ಹೊರಡಿಸಿ ಅಸ್ಪೃಶ್ಯರಿಗೆ ಶಿಕ್ಷಣವನ್ನು ಉಚಿತ ಮತ್ತು ಕಡ್ಡಾಯಗೊಳಿಸಿದರು. ತಮಿಳುನಾಡಿನ ಪೆರಿಯಾರ್ ರಾಮಸ್ವಾಮಿ, ಶಾಹೂ ಮಹಾರಾಜರು ಮತ್ತು ಸ್ವಾಮಿ ವಿವೇಕಾನಂದರ ಪ್ರಭಾವದಿಂದ ಕರ್ನಾಟಕದ ಮೈಸೂರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಪ್ರಾಂತ್ಯದಲ್ಲಿ ಮೀಸಲಾತಿಯನ್ನು ಜಾರಿಗೊಳಿಸಿದರು. ಇದನ್ನು ಅವರು ಮಿಲ್ಲರ್ ವರದಿಯನ್ನಾದರಿಸಿ

ಜಾರಿಗೊಳಿಸಿದ್ದು ವಿಶೇಷ. ಇದರ ಪ್ರಕಾರ ಅವರು 1921ರಲ್ಲಿಯೇ ಶೇ.75ರಷ್ಟು ಮೀಸಲಾತಿಯನ್ನು ಶೂದ್ರರು ಮತ್ತು ಅಸ್ಪೃಶ್ಯರನ್ನು ಒಳಗೊಂಡಂತೆ ಜಾರಿಗೊಳಿಸಿದರು. ಈ ಮೂಲಕ ಸರ್ಕಾರದ ಉನ್ನತ ಹುದ್ದೆಗಳಲ್ಲಿ ಅರ್ಧದಷ್ಟು ಮತ್ತು ಕೆಳದರ್ಜೆಯ ಹುದ್ದೆಗಳಲ್ಲಿ ಮೂರನೆಯ ಎರಡರಷ್ಟನ್ನು ಹಿಂದುಳಿದವರಿಗೆ ಕಲ್ಪಿಸಿದರು. 1890ರಲ್ಲಿ ಅಯತೋದಾಸ ಪಂಡಿತರು ಬ್ರಿಟಿಷರ ಮದ್ರಾಸ್ ಪ್ರಸಿಡೆನ್ಸಿಯಲ್ಲಿ ದಲಿತರಿಗೆ ಮೀಸಲಾತಿಯನ್ನು ನೀಡಬೇಕೆಂದು ಒತ್ತಾಯಿಸಿದರು. 1928ರಲ್ಲಿ ಸೈಮನ್ ಕಮಿಷನ್, 1930ರಲ್ಲಿ ದುಂಡುಮೇಜಿನ ಪರಿಷತ್ತಿನ ಮುಂದೆ ಡಾ.ಬಿ.ಆರ್. ಅಂಬೇಡ್ಕರ್‌ರವರ ನೇತೃತ್ವದಲ್ಲಿ ಮೀಸಲಾತಿಗಾಗಿ ಹೋರಾಟ ನಡೆದವು. ಇದರ ಫಲವಾಗಿ 1932ರಲ್ಲಿ 'ದ್ವಿ–ಮತದಾನ' ಪದ್ಧತಿ ಮತ್ತು ಪ್ರತ್ಯೇಕ ಕ್ಷೇತ್ರಗಳ ಬದಲಾಗಿ ಮೀಸಲಾತಿ ಸ್ಥಾನಗಳು ಪೂನಾ ಒಪ್ಪಂದದ ಮೂಲಕ ಲಭಿಸಿದವು. ಮುಂದೆ ಅದು ಸಂವಿಧಾನದಲ್ಲಿ ಸ್ಥಾನ ಪಡೆಯಿತು. ಕೇರಳದಲ್ಲಿ ಶ್ರೀ ನಾರಾಯಣ ಗುರುಗಳು ಈಳವ ಜನಾಂಗಕ್ಕೆ ದೇವಾಲಯ ಪ್ರವೇಶ ಮತ್ತು ಈಳವ ಜನಾಂಗದ ಸಂಘಟನೆಗಾಗಿ ಶ್ರಮಿಸಿದರು. ಇದರಿಂದಾಗಿ ಶಿಕ್ಷಣ ಹಾಗೂ ಮುಂತಾದ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಅವರು ತಂದರು. ಈ ಪರಿಣಾಮವಾಗಿ 1935ರಲ್ಲಿ ತಿರುವಾಂಕೂರು ಮಹಾರಾಜರು ಮತ್ತು ತದನಂತರ ಕೊಚ್ಚಿನ್ ಮಹಾರಾಜರು ಮೀಸಲಾತಿ ಕ್ರಮಗಳನ್ನು ಜಾರಿಗೊಳಿಸಿದ್ದು ಕಂಡುಬರಯತ್ತದೆ. ಬಾಂಬೆ ಪ್ರೆಸಿಡೆನ್ಸಿಯಲ್ಲಿ 1931ರಲ್ಲಿ ಮೀಸಲಾತಿಯನ್ನು ಜಾರಿಗೊಳಿಸಲಾಯಿತು.

ಕೇಂದ್ರ ಸರ್ಕಾರವು ಸೆಪ್ಟೆಂಬರ್ 21, 1947ರಲ್ಲಿ ಅಧಿಸೂಚನೆ ಹೊರಡಿಸಿ ಸರ್ಕಾರಿ ನೇಮಕಾತಿಯ ಮುಕ್ತ ಸ್ಪರ್ಧೆಯಲ್ಲಿ ಪರಿಶಿಷ್ಟ ಸಮುದಾಯಗಳಿಗೆ ಶೇ.12.5ರಷ್ಟು ಮೀಸಲಾತಿ ನೀಡುವಂತೆ ಸೂಚಿಸಿತು. ಮುಕ್ತ ಸ್ಪರ್ಧೆಯನ್ನು ಹೊರತುಪಡಿಸಿ ಇತರೆ ನೇಮಕಾತಿಯಲ್ಲಿ ಈ ಪ್ರಮಾಣವು ಶೇ.16.66ರಷ್ಟು ಇರಬೇಕೆಂದು ಸೂಚಿಸಿತು. ಸೆಪ್ಟೆಂಬರ್ 13, 1950ರ ನಿರ್ಣಯದಲ್ಲಿ ಪರಿಶಿಷ್ಟ ಪಂಗಡಕ್ಕೆ ಶೇ.5ರಷ್ಟು ಮೀಸಲಾತಿಯನ್ನು ನಿಗದಿಪಡಿಸಿತು. ಈ ಮೀಸಲಾತಿಯು ಈಗಾಗಲೇ ಪರಿಶಿಷ್ಟ ಜಾತಿಗೆ ನಿಗದಿಪಡಿಸಿರುವ ಮೀಸಲಾತಿಯನ್ನು ಹೊರತುಪಡಿಸಿ ಇರುತ್ತದೆ. ಮಾರ್ಚ್ 25, 1970 ರಂದು 1961ರ ಜನಗಣತಿಯ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಮಾಣವನ್ನು ಶೇ.12.5 ರಿಂದ ಶೇ.15ಕ್ಕೆ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ.5 ರಿಂದ ಶೇ.7.5ಕ್ಕೆ ಪರಿಷ್ಕರಿಸಲಾಯಿತು. ಆಗಸ್ಟ್ 13, 1990ರ ಆದೇಶದಂತೆ ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ.27ರಷ್ಟು ಮೀಸಲಾತಿಯನ್ನು ನೀಡಬೇಕೆಂದು ಆದೇಶಿಸಿದೆ. (ಹೆಚ್ ಎನ್ ನಾಗಮೋಹನದಾಸ್, 2022) ಆದರೆ ಮೀಸಲಾತಿ ಎನ್ನುವುದು ಬಡತನ ನಿರ್ಮೂಲನ ಕಾರ್ಯಕ್ರಮವಲ್ಲ. ಸಮಮಾಜದಲ್ಲಿ ಪ್ರಾತಿನಿಧ್ಯ ವಂಚಿತರಿಗೆ ಪ್ರಾತಿನಿಧ್ಯ ನೀಡುವುದಾಗಿದೆ. ಮೀಸಲಾತಿಯು ಅನುಕಂಪದಿಂದ ಪಡೆಯುವುದಲ್ಲ; ಬದಲಿಗೆ ಉನ್ನತ ವರ್ಗಗಳಿಗೆ ಸಮಾನವಾದ ಘನತೆಯ ಬದಕನ್ನು ಕಟ್ಟಿಕೊಳ್ಳವುದಕ್ಕಾಗಿ ಸಂವಿಧಾನವು ನೀಡಿದ ಶಾಸನಬದ್ಧ ಹಕ್ಕಾಗಿದೆ.

**ಆರ್ಥಿಕ ದುರ್ಬಲ ವರ್ಗಗಳ ಮೀಸಲಾತಿ ಮತ್ತು ಸಂವಿಧಾನಾತ್ಮಕತೆ**

2019ರಲ್ಲಿ ಸಂವಿಧಾನದ 103ನೇ ತಿದ್ದುಪಡಿ ಮಸೂದೆಯು ಸಾಮಾನ್ಯ ವರ್ಗಕ್ಕೆ, (Economically Weaker Section-EWS), ಆರ್ಥಿಕ ದುರ್ಬಲ ವರ್ಗಗಳಿಗೆ–(ಇಡಬ್ಲ್ಯುಎಸ್) ಉದ್ಯೋಗ, ನೇರ ನೇಮಕಾತಿ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಪ್ರವೇಶದಲ್ಲಿ ಶೇ.10ರಷ್ಟು ಮೀಸಲಾತಿಯನ್ನು ನೀಡಿದೆ. ಎಸ್ಸಿ/ಎಸ್ಟಿ ಮತ್ತು ಒಬಿಸಿ ಅಸ್ತಿತ್ವದಲ್ಲಿರುವ ಕೋಟಾಗಳನ್ನು ಮುಟ್ಟದಂತೆ ಸಾಮಾನ್ಯ ವರ್ಗದ EWS ನವರಿಗೆ ಮೀಸಲಾತಿಯನ್ನು

ನಿಗದಿಪಡಿಸಲಾಗಿದೆ. ಈ ಮಸೂದೆಯು ಬ್ರಾಹ್ಮಣರು, ರಜಪೂತರು (ಠಾಕೂರ್‌ಗಳು), ಜಾಟ್‌ಗಳು, ಮರಾಠರು, ಭೂಮಿಹಾರ್‌ಗಳು, ಕಾಪುಗಳು ಸೇರಿದಂತೆ ಹಲವು ಮೇಲ್ಜಾತಿಗಳ ಅಥವಾ ಸವರ್ಣೀಯ ವರ್ಗಗಳು ಪ್ರಯೋಜನವನ್ನು ಪಡೆಯುತ್ತಾರೆ ಎಂದು ನಂಬಲಾಗಿದೆ. 07–11–2022ರಂದು ಸುಪ್ರೀಂ ಕೋರ್ಟಿನ ಐದು ಸದಸ್ಯರ ಪೀಠವು ಇತ್ತೀಚೆಗೆ ಜನಹಿತ್ ಅಭಿಯಾನ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ 2019ರ, EWS–55 ಪ್ರಕರಣದಲ್ಲಿ 3:2ರ ಬಹುಮತ ತೀರ್ಪು ನೀಡುವುದರೊಂದಿಗೆ ಆರ್ಥಿಕ ದುರ್ಬಲ ವರ್ಗಗಳ ಮೀಸಲಾತಿಯು ಸಾಂವಿಧಾನಿಕವಾಗಿ ಮಾನ್ಯವಾಗಿದೆ ಎಂದು ಎತ್ತಿಹಿಡಿದಿದೆ.

ಆರ್ಥಿಕ ದುರ್ಬಲ ವರ್ಗಗಳಿಗೆ (EWS) ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇ.10%ರಷ್ಟು ಮೀಸಲಾತಿಗಾಗಿ ವಿಶೇಷ ನಿಬಂಧನೆಯನ್ನು ಮಾಡಿದೆ. ಪರಿಶಿಷ್ಟ ಜಾತಿಗಳು (ಪಜಾ), (Schedule Caste-SC), ಪರಿಶಿಷ್ಟ ಪಂಗಡಗಳು (ಪಪಂ), (Schedule Tribes-ST) ಮತ್ತು ಇತರೆ ಹಿಂದುಳಿದ ವರ್ಗಗಳಿಗೆ (Other Backward Class-OBC) (ಒಬಿಸಿ) ಆಧಾರಿತ ಮೀಸಲಾತಿ ತಿದ್ದುಪಡಿಯು ಸಮಾನತೆಯ ಹಕ್ಕನ್ನು ಒಳಗೊಂಡಿರುವ ಸಂವಿಧಾನದ 15 ಮತ್ತು 16 ಅನುಚ್ಛೇದಗಳಿಗೆ ಬದಲಾವಣೆಯನ್ನು ಸಂಯೋಜಿಸಲಾಗಿದೆ. ಆರ್ಥಿಕ ದುರ್ಬಲ ವರ್ಗಗಳ ಮೀಸಲಾತಿಗೆ ಕಾನೂನು ಆಧಾರವನ್ನು ರಚಿಸಿತು. ಸಂವಿಧಾನದ ಅನುಚ್ಛೇದ–15ರ 4 ಮತ್ತು 5ನೇ ಉಪವಿಧಿಯ ಪ್ರಕಾರ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಎಸ್ಸಿ/ಎಸ್ಟಿ ಅಭಿವೃದ್ಧಿಗಾಗಿ ರಾಜ್ಯವು ವಿಶೇಷ ಕಾನೂನುಗಳನ್ನು ರೂಪಿಸಬೇಕು. ಆದರೆ ಅನುಚ್ಛೇದ 15 ಮತ್ತು 16 ವಿಧಿಗೆ ತಿದ್ದುಪಡಿ ತರುವ ಮೂಲಕ 6ನೇ ಉಪವಿಧಿಯನ್ನು ಸೇರಿಸಿ, ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ತರಲಾಯಿತು. ಇದಕ್ಕೆ ಅನುಗುಣವಾಗಿ ಯಾವುದೇ ಆರ್ಥಿಕವಾಗಿ ದುರ್ಬಲಗೊಂಡಿರುವ ವರ್ಗಗಳ ಪ್ರಗತಿಗೆ ವಿಶೇಷ ನಿಬಂಧನೆ ತರಲಾಯಿತು. ಇದರಲ್ಲಿ ಉಲ್ಲೇಖಿತ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳನ್ನು ಹೊರತುಪಡಿಸಿ ನಿಬಂಧನೆಯನ್ನು ಜಾರಿಗೊಳಿಸಲಾಯಿತು. ಖಾಸಗಿ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಇತರ ಶಿಕ್ಷಣ ಸಂಸ್ಥೆಗಳಿಗೆ ಅವರ ಪ್ರವೇಶಕ್ಕೆ ಸಂಬಂಧಿಸಿದಂಥ ವಿಶೇಷ ನಿಬಂಧನೆಗಳು (4) ಮತ್ತು (5) ರಲ್ಲಿ ಸೇರಿಸಿತು. ಇದು ಉಲ್ಲೇಖಿಸಲಾದ ವರ್ಗಗಳನ್ನು ಹೊರತುಪಡಿಸಿ, ಇತರ ನಾಗರಿಕರ 30ನೇ ವಿಧಿಯ 1ನೇ ಖಂಡದಲ್ಲಿ ಮೀಸಲಾತಿಯ ಸಂದರ್ಭದಲ್ಲಿ ಅಸ್ತಿತ್ವದಲ್ಲಿರುವ ಮೀಸಲಾತಿಗಳಿಗೆ ಹೆಚ್ಚುವರಿಯಾಗಿ ಮತ್ತು ಪ್ರತಿ ವರ್ಗದ ಒಟ್ಟು ಸೀಟುಗಳ ಗರಿಷ್ಠ ಶೇ.10ರಷ್ಟು ಒಳಪಟ್ಟಿರುತ್ತದೆ ಎಂಬುದನ್ನು ಸ್ಪಷ್ಟಪಡಿಸಿತು. ಆದರೆ 15 ಮತ್ತು 16 ಅನುಚ್ಛೇದಗಳು ಒಳಗೊಂಡಿರುವ ಸೂಕ್ಷ್ಮ ಅಂಶಗಳು, 'ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜನರಿಗೆ ಮೀಸಲಾತಿ ನೀಡಬೇಕೇ; ಹೊರತು ಆರ್ಥಿಕವಾಗಿ ಹಿಂದುಳಿದವರಿಗಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ'. ಸಂವಿಧಾನದ 14, 15, 16 ಮತ್ತು 17ನೇ ಅನುಚ್ಛೇದಗಳು ಮತ್ತು ಉಪವಿಧಿಗಳು ಸಮಾನತೆಯ ಸಂಹಿತೆಗಳಾಗಿವೆ. ಆದರೆ ದುರಂತವೆಂದರೆ 15 ಮತ್ತು 16ನೇ ಅನುಚ್ಛೇದಗಳಿಗೆ ಪ್ರತ್ಯೇಕವಾಗಿ 6ನೇ ಉಪವಿಧಿಯನ್ನು ಸೇರಿಸಲಾಯಿತು. ಇದು ಆರ್ಥಿಕ ದುರ್ಬಲ ವರ್ಗಗಳಿಗೆ ಮೀಸಲಾತಿಯನ್ನು ನೀಡಬೇಕೆನ್ನುವ ಮೂಲಕ ಸಮಾಜದಲ್ಲಿ ಅಸಮಾನತೆಗೆ ಆಸ್ಪದ ನೀಡಿದೆ ಎನ್ನುವುದು ಸ್ಪಷ್ಟವಾಗುತ್ತದೆ.

ಆರ್ಥಿಕ ದುರ್ಬಲ ವರ್ಗಗಳಿಗೆ ಮೀಸಲಾತಿಯನ್ನು ನೀಡುವ ಭರದಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಮಾನದಂಡಗಳನ್ನು ಹೊರತುಪಡಿಸಿ, ಆರ್ಥಿಕ ಮಾನದಂಡವನ್ನು ಬಳಸಿಕೊಂಡಿರುವುದು ಸಾಮಾಜಿಕ

ಅಸಮಾನತೆಯ ಸ್ಥಿರತೆಗೆ ಕಾರಣವಾಗುತ್ತದೆ. ಸಂವಿಧಾನವು ಎಸ್ಸಿ/ಎಸ್ಟಿ ವರ್ಗಗಳಿಗೆ ಮೀಸಲಾತಿ ನೀಡುವುದಕ್ಕೆ ಅಸ್ಪೃಶ್ಯತೆ, ಸಾಮಾಜಿಕ ಮತ್ತು ಶೈಕ್ಷಣಿಕ ಅಂಶಗಳನ್ನು ಮಾನದಂಡಗಳನ್ನಾಗಿ ಬಳಸಿಕೊಳ್ಳಬೇಕೆಂದು ಸೂಚಿಸಿತ್ತು. ಆದರೆ ಆರ್ಥಿಕ ದುರ್ಬಲ ವರ್ಗಗಳಿಗೆ ಆರ್ಥಿಕ ಮಾನದಂಡಗಳನ್ನು ಬಳಸಿಕೊಂಡಿರುವುದು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ. ಅಲ್ಲದೆ, ಆರ್ಥಿಕ ದುರ್ಬಲ ವರ್ಗಗಳ ಮೀಸಲಾತಿಯಲ್ಲಿ ಎಸ್ಸಿ/ಎಸ್ಟಿ ಮತ್ತು ಒಬಿಸಿ ಸಮುದಾಯಗಳನ್ನು ಹೊರಗಿಟ್ಟಿರುವದು ಕಂಡುಬರುತ್ತದೆ. ಇದು ಸಂವಿಧಾನದ ಮೂಲ ನೆಲಗಟ್ಟಿಗೆ ಧಕ್ಕೆ ತಂದಿದೆ ಎಂದು ನ್ಯಾಯಮೂರ್ತಿ ಎಸ್.ರವೀಂದ್ರ ಭಟ್ ಮತ್ತು ಯು.ಯು.ಲಲಿತ್ ಅವರು ಹೇಳಿಕೆ ನೀಡಿದ್ದು ಕಂಡು ಬರುತ್ತದೆ. (ಪ್ರಜಾವಾಣಿ ದಿನ ಪತ್ರಿಕೆ, ನವೆಂಬರ್, 30 2022.) ಮೀಸಲಾತಿಯ ಪರದಿಯೊಳಗೆ 103ನೇ ತಿದ್ದುಪಡಿ ತರುವ ಮೂಲಕ ದೇಶದಲ್ಲಿ ಹೊಸದೊಂದು ವರ್ಗ ಸೃಷ್ಟಿ ಮಾಡಿದೆ ಎಂದು ಹೇಳಬಹುದು! ಅಥವಾ ಹೊಸದೊಂದು ಜಾತಿ ಸೃಷ್ಟಿಸಿದೆ ಎಂದು ವ್ಯಾಖ್ಯಾನಿಸಬಹದಾಗಿದೆ! ಸಂವಿಧಾನಕ್ಕೆ ವಿರುದ್ಧವಾದ ಆಶಯವು ಸಂವಿಧಾನಾತ್ಮಕವಾಗಿ ಕಾನೂನು ಬದ್ಧಗೊಂಡಿದೆ ಎನ್ನುವ ಅಂಶ ಇಲ್ಲಿ ವಿಶೇಷ.

**ಇಡಬ್ಲ್ಯುಎಸ್‌ನ ಮಾನದಂಡಗಳು**

ಮೇಲ್ವರ್ಗದಲ್ಲಿ, ಆರ್ಥಿಕ ದುರ್ಬಲ ವರ್ಗಗಳೆಂದು ಗುರುತಿಸಲು ಇರುವ ಮಿತಿಗಳು ಈ ರೀತಿ ಇವೆ. ಅವುಗಳಲ್ಲಿ ಒಂದು, 8 ಲಕ್ಷಕ್ಕಿಂತ ಕಡಿಮೆ ವಾರ್ಷಿಕ ಆದಾಯ ಇರುವವರು. ಎರಡು, 5 ಎಕರೆಗಿಂತ ಕಡಿಮೆ ಜಮೀನನ್ನು ಹೊಂದಿರುವವರು. ಮೂರು, 1000 ಚದುರ ಅಡಿಗಿಂತ ಕಡಿಮೆ ವಿಸ್ತೀರ್ಣದ ಮನೆ ಹೊಂದಿರುವವರು. ಇಂತಹ ಜನರನ್ನು ಆರ್ಥಿಕ ಹಿಂದುಳಿದವರೆಂದು ಪರಿಗಣಿಸಲಾಗುವುದು ಎನ್ನುವ ಮಾನದಂಡಗಳನ್ನು ಕೇಂದ್ರ ಸರ್ಕಾರವು ನಿಗದಿಪಡಿಸಿತು. ಆದರೆ ಇದು ಸಂವಿಧಾನದ ಮೂಲ ಆಶಯಕ್ಕೆ ವಿರುದ್ಧವಾಗಿದೆಂದು ಆರೋಪಿಸಿ ಹಲವಾರು ಜನರು ಸುಪ್ರೀಂ ಕೋರ್ಟ್ ಮೊರೆಹೋಗಿ ಅರ್ಜಿ ಸಲ್ಲಿಸಿದ್ದರು. ಆದರೆ ಇಂಥ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

**ಪ್ರಸಕ್ತ ಸಮಸ್ಯೆಗಳು**

ದೇಶದ ಎಲ್ಲ ಜಾತಿಗಳು ಮತ್ತು ವರ್ಗಗಳು ತಮ್ಮನ್ನು ಮೀಸಲಾತಿಯ ಪರದಿಯೊಳಗೆ ಸೇರಿಸಬೇಕೆಂಬ ಆಗ್ರಹ ಮತ್ತು ಹೋರಾಟಗಳು ದೇಶಾದ್ಯಂತ ನಡೆಯುತ್ತಿರುವ ಪ್ರಸ್ತುತ ಸಂದರ್ಭದಲ್ಲಿ, ದಲಿತರು ಕುತೂಹಲಕಾರಿ ಘಟ್ಟವನ್ನು ಪ್ರವೇಶಿಸುತ್ತಿದ್ದಾರೆ. ಅದೇನೆಂದರೆ, ಮೀಸಲಾತಿಯನ್ನು ಒಪ್ಪದ ದಲಿತೇತರರು ಸಮಾಜದಲ್ಲಿ ಮೀಸಲಾತಿ ಎಂದರೆ ಒಂದು ಕಳಂಕಿತ ಎನ್ನುವ ಪರಿಕಲ್ಪನೆ ಎಂಬ ರೀತಿಯಲ್ಲಿ ಬಿಂಬಿಸುತ್ತಿದ್ದರು, ಈಗಲೂ ದಲಿತರು ಮಾತ್ರ ಮೀಸಲಾತಿ ಪಡೆಯುತ್ತಿದ್ದಾರೆ ಎಂಬಂತೆ ಮಾಧ್ಯಮಗಳ ಮೂಲಕ ಬಿಂಬಿಸುತ್ತಿದ್ದಾರೆ. ಇದರ ಒಳಾರ್ಥ ಮೀಸಲಾತಿಯನ್ನು ರದ್ದುಪಡಿಸಿ ಸಾರ್ವಜನಿಕ ಸಂಸ್ಥೆಗಳಲ್ಲಿ ಪ್ರತಿಭೆ, ಸಾಮರ್ಥ್ಯ, ಕೌಶಲ ಆಧಾರದ ಮೇಲೆ ಪುನಃ ಸ್ಥಾಪಿಸಬೇಕೆಂಬ ಹೆಬ್ಬಯಕೆ ಗೋಚರವಾಗುತ್ತಿತ್ತು! ಮೀಸಲಾತಿಯಿಂದ ದೇಶದ ಅಭಿವೃದ್ಧಿ ಮತ್ತು ಸಮಾಜದ ಐಕ್ಯತೆಗೆ ಧಕ್ಕೆ ತರುತ್ತದೆ ಎಂಬ ಅಭಿಪ್ರಾಯವನ್ನುಂಟು ಮಾಡುತ್ತಿದ್ದರು. ಜಾತಿ ಆಧಾರಿತ ಮೀಸಲಾತಿಯು ಸಮಾಜದಲ್ಲಿ ಜಾತಿಯನ್ನು ನಾಶಗೊಳಿಸುವ ಬದಲು ಜಾತಿವಾದವನ್ನು ಹೆಚ್ಚಿಸುತ್ತದೆ ಎಂದು ಬಿಂಬಿಸುತ್ತಿದ್ದರು. ವಿಪರ್ಯಾಸವೆಂದರೆ ಯಾವ ಮೇಲ್ವರ್ಗದ ಸಮುದಾಯಗಳು ಮೀಸಲಾತಿಯನ್ನು ವಿರೋಧಿಸುತ್ತಿದ್ದವೋ ಇಂದು ಆ ಸಮುದಾಯಗಳೇ ತಾವಿರುವ ಜನಸಂಖ್ಯೆಗಿಂತ ಹೆಚ್ಚಿನ ಪ್ರಮಾಣದ ಮೀಸಲಾತಿ ಪಡೆದುಕೊಂಡಿದ್ದಾರೆ. ಆದ್ದರಿಂದ ದಲಿತರು ಮೀಸಲಾತಿ ಕುರಿತು ಹೊಸ ಆಯಾಮಗಳನ್ನು ಚರ್ಚಿಸುವ ಕುತೂಹಲಕಾರಿ ಘಟ್ಟಕ್ಕೆ ಬಂದಿದ್ದಾರೆ.

ಹಿಂದುಳಿದ ಜನರನ್ನು ಕೆಳಸ್ತರದಿಂದ ಮೇಲೆತ್ತಲು ಮೀಸಲಾತಿ ನೀಡಿದ್ದು ಒಂದು ಕಾರಣ. ಮೀಸಲಾತಿ

ಕೇವಲ ಎಸ್ಸಿ/ಎಸ್ಟಿಗೆ ನೀಡುವುದು ಸಾಮಾಜಿಕ ನ್ಯಾಯವಲ್ಲ! ಆರ್ಥಿಕವಾಗಿ ಹಿಂದುಳಿದ ಎಲ್ಲ ವರ್ಗಗಳಿಗೂ ಮೀಸಲಾತಿ ನೀಡಬೇಕು ಎನ್ನುವಂತಿದೆ. ಅಂದರೆ, ಆರ್ಥಿಕವಾಗಿ ನೀಡುವ ಮೀಸಲಾತಿಯೇ ಸರಿ ಎನ್ನುವ ಹಾಗೇ ಮೇಲ್ನೋಟಕ್ಕೆ ಬಿಂಬಿತವಾಗುತ್ತದೆ! ಆದರೆ ದಲಿತನು ಮಾತ್ರ ತನ್ನ ಹುಟ್ಟಿನ ಜೊತೆಗೆ ಜಾತಿಯನ್ನು ಸಹ ಪಿತ್ರಾರ್ಜಿತವಾಗಿ ಪಡೆಯುತ್ತಾನೆ. ಅಷ್ಟಲ್ಲದೆ ಬಡತನ, ದಾರಿದ್ರ್ಯ, ಅಸ್ಪೃಶ್ಯತೆ, ಅವಮಾನಗಳು ಸಹ ಇವುಗಳೊಂದಿಗೆ ಪಡೆದುಕೊಳ್ಳುತ್ತಾನೆ. ಅಸ್ಪೃಶ್ಯತೆಯನ್ನು ನಿರ್ಲಕ್ಷಿಸಿ ದಲಿತನು ಅಸ್ಪೃಶ್ಯತೆಯ ನೋವನ್ನು ಮರೆಯಬೇಕೆಂದು ಮುಂದೆ ಬಂದರೆ, ಈ ಸಮಾಜ ಅವನನ್ನು ಪದೇಪದೇ ನೀನು ಅಸ್ಪೃಶ್ಯನು ಎನ್ನುವುದನ್ನು ನೆನಪಿಸುತ್ತದೆ. ದಲಿತನು ಸುದೀರ್ಘಕಾಲ ತುಳಿತಕ್ಕೆ ಒಳಗಾಗಿದ್ದಾನೆ. ದಲಿತನನ್ನು ಮೇಲೆತ್ತುವ ಅದಮ್ಯ ಉದ್ದೇಶದಿಂದಲೇ ಮೀಸಲಾತಿಯನ್ನು ನೀಡಲಾಗಿದೆ. ಆದರೆ ದಲಿತರು ಸವರ್ಣೀಯರೊಂದಿಗೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕವಾಗಿ ಸಮಾನರೆಂದು ಭಾವಿಸಲು ಸಾಧ್ಯವಾಗದಂತಹ ಧರ್ಮದ ಬೇರುಗಳು ನಮ್ಮಲ್ಲಿವೆ. ಈ ದೌರ್ಬಲ್ಯವನ್ನು ಸರಿಪಡಿಸದ ಕಾರಣ ದಿಂದಾಗಿಯೇ ಮೀಸಲಾತಿ ನೀಡಲಾಗಿದೆ ಎಂದು ಬಿಂಬಿಸಬೇಕಾಗಿತ್ತು. ಮೀಸಲಾತಿ ಎನ್ನುವುದು ಸಾಮಾಜಿಕ ಮತ್ತು ಧಾರ್ಮಿಕವಾಗಿ ಸಮಾನತೆಯನ್ನು ಸಾಧಿಸುವುದಕ್ಕೋಸ್ಕರ ನೀಡಿರುವ ಶಕ್ತಿಯಾಗಿದೆ ಎಂದು ಬಿಂಬಿಸಬೇಕಿತ್ತು. ಆದರೆ ಮೀಸಲಾತಿನ್ನು ಅಪವ್ಯಾಖ್ಯಾನಿಸಿ ದಲಿತರು ಬಡವರಾಗಿದ್ದು, ಬಡತನ ನಿರ್ಮೂಲನೆಗಾಗಿ ಮೀಸಲಾತಿ ನೀಡಲಾಗಿದೆ ಇಂದು ಬಿಂಬಿಸಲು ಬ್ರಾಹ್ಮಣಿಸಂ ಸಫಲವಾಯಿತು. ಮೀಸಲಾತಿಗೆ ಆರ್ಥಿಕ ಅಂಶವನ್ನು ಲೇಪನಗೊಳಿಸಿ ಮೀಸಲಾತಿಯನ್ನು ಅಪಭ್ರಂಶಗೊಳಿಸಿದರು. ಮೇಲ್ಜಾತಿಗಳಲ್ಲಿ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಶೇ.10ರಷ್ಟು ಮೀಸಲಾತಿಯನ್ನು ನೀಡಿದ್ದು ಸಾಮಾಜಿಕ ನ್ಯಾಯ ತತ್ವಕ್ಕಿರುವ ನೈತಿಕತೆಯನ್ನು ಅಮಾನ್ಯಗೊಳಿಸಿದೆ. ಈ ಮೀಸಲಾತಿಗೆ ಹಲವಾರು ಚಿಂತಕರು, ರಾಜಕೀಯ ಪಕ್ಷಗಳು ಮತ್ತು ಜನಸಾಮಾನ್ಯರ ವಿರೋಧವೂ ಕೇಳಿಬಂದಿತ್ತು. ಶೈಕ್ಷಣಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಯನ್ನು ನಿಷ್ಕರ್ಷೆ ಮಾಡಲು ಸರ್ಕಾರ ನಿಗದಿಪಡಿಸಿದ ಮಾನದಂಡಗಳ ಬಗೆಗೆ ಆಕ್ಷೇಪಣೆಯೂ ವ್ಯಕ್ತವಾಯಿತು. ಅಲ್ಲದೆ ಸಾಂವಿಧಾನಿಕ ಆಯೋಗವು ಈ ಬಗ್ಗೆ ಸೂಕ್ತ ಮತ್ತು ಸಮಗ್ರ ದಾಖಲಾತಿಗಳನ್ನು ಸಂಗ್ರಹಿಸದೆ ಕ್ಷಿಪ್ರಗತಿಯಲ್ಲಿ EWS ಮೀಸಲಾತಿಯ ಪ್ರಮಾಣ ಹೇಗೆ ನಿಗದಿ ಮಾಡಿತು? ಎನ್ನುವುದೇ ಜಿಜ್ಞಾಸೆಯಾಗಿದೆ.

**ಇಡಬ್ಲ್ಯುಎಸ್‌ನ ನಿರೀಕ್ಷೆಗಳು**

ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಯಾವ ಬಗೆಯ ಅನುಕೂಲ ದಕ್ಕುತ್ತದೆ ಎನ್ನುವ ಅವಲೋಕನ ಪ್ರಸ್ತುತದಲ್ಲಿ ಅಗತ್ಯವಿದೆ. ಮೇಲ್ಜಾತಿಯ ಜನರು ಉದ್ಯೋಗ ಮತ್ತು ವೃತ್ತಿಯ ಶಿಕ್ಷಣಕ್ಕೆ ಸುಳ್ಳು ಪ್ರಮಾಣ ಪತ್ರ ಪಡೆದುಕೊಳ್ಳುವ ಹತಾಶೆಯನ್ನು ಈ ಮೀಸಲಾತಿ ತುಂಬುತ್ತದೆ ಎಂದು ನಿರೀಕ್ಷಿಸಲಾಗಿದೆ. ಪಜಾ ಮತ್ತು ಪಪಂ ಎಂದು ಪ್ರಮಾಣ ಪತ್ರ ಪಡೆದುಕೊಳ್ಳಲು ಸವರ್ಣೀಯರು ದತ್ತಕವಾಗುವುದನ್ನು ತಡೆಯುತ್ತದೆ. ಈ ಬಗೆಯಲ್ಲಿ ಮೋಸ ಪೂರಿತವಾದ ಸ್ವನಿರ್ವಚನ ಮಾಡಿಕೊಳ್ಳಲು ಮುಂದಾಗುವ ಅನಿವಾರ್ಯತೆಯನ್ನು ಹೋಗಲಾಡಿಸುತ್ತದೆ ಎನ್ನಬಹುದಾಗಿದೆ. ಈ ಮೀಸಲಾತಿಯು ಸವರ್ಣೀಯರು ತಮ್ಮ ಅಧಿಕೃತ ಮೇಲ್ಜಾತಿ ಅಸ್ಮಿತೆಯನ್ನು ಉಳಿಸಿಕೊಳ್ಳಲು ಸಹಾಯಕವಾಗಿ ನಿಲ್ಲುತ್ತದೆ. ಸುಳ್ಳು ಜಾತಿ ಪ್ರಮಾಣ ಪತ್ರದಿಂದ ನ್ಯಾಯಾಲಯಗಳಲ್ಲಿ ಆಗಬಹುದಾಗಿದ್ದ ಅಪಮಾಗಳನ್ನು ಕನಿಷ್ಠಗೊಳಿಸುತ್ತದೆ. ಮೀಸಲಾತಿಯ ಫಲಾನುಭವಿಗಳಾದ ಎಸ್ಸಿ/ಎಸ್ಟಿ ಮತ್ತು ಒಬಿಸಿಗಳಂತೆ ಆರ್ಥಿಕ ದುರ್ಬಲ ವರ್ಗಗಳ ಮೀಸಲಾತಿಯ ಬಿರುದಾರರಿಗೆ ಸೇರಬೇಕೆಂದು ಮೇಲ್ಜಾತಿಗಳಲ್ಲಿದ್ದ ಅಸ್ತೆಯನ್ನು ಗಟ್ಟಿಗೊಳಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

**ಇಡಬ್ಲ್ಯುಎಸ್ ಮತ್ತು ಸಾಮಾಜಿಕ ಅಂಶಗಳು**

ಪ್ರಸಕ್ತದಲ್ಲಿಯೂ ದಲಿತರು 412 ಮಿಲಿಯನ್ ಜನಸಂಖ್ಯೆಯಲ್ಲಿ 159 ಮಿಲಿಯನ್ (38.59%) ಮತ್ತು ಒಬಿಸಿ 588 ಮಿಲಿಯನ್ ಜನಸಂಖ್ಯೆಯಲ್ಲಿ 160 ಮಿಲಿಯನ್ (27.2%) ಜನರು ಬಹು ಆಯಾಮಗಳ ಬಡತನದಿಂದ ಬಳಲುತ್ತಿದ್ದಾರೆ (Global Multidimensional Poverty Indix, 2021) ಮೀಸಲಾತಿ ನೀಡುವ ಭರದಲ್ಲಿ ಸಮಾಜದಲ್ಲಿರುವ ಆಳವಾಗಿ ನೆಲೆಯೂರಿದ ಸಮಸ್ಯೆಗಳನ್ನೇ ನಿರ್ಲಕ್ಷ್ಯ ಮಾಡಿದೆ. ದಲಿತರಿಗೆ ನೀಡಲಾಗಿದ್ದ ಮೀಸಲಾತಿಯ ಮಾನದಂಡದ ಬುನಾದಿಗೆ ತದ್ವಿರುದ್ಧವಾಗಿ ಜಾರಿಗೋಳಿಸಿದ್ದಾರೆ. ದಲಿತರು ಸಾಮಾಜಿಕ ಅಸಮಾನತೆ, ನೋವುಗಳನ್ನು ಅನುಭವಿಸಿ ನೋವಿನ ಮೂಲಾಂ ಆಗಿ ಮೀಸಲಾತಿಯನ್ನು ಪಡೆದುಕೊಂಡಿದ್ದಾರೆ. ಬಹಿಷ್ಕಾರಕ್ಕೆ, ದೌರ್ಜನ್ಯಕ್ಕೆ, ಹಿಂಸಾಚಾರಕ್ಕೆ ಮತ್ತು ವೈಕಲ್ಯಗಳಿಗೆ ತುತ್ತಾದ ಅನುಭವಗಳೇ ಇಲ್ಲದ ಮೇಲ್ಜಾತಿಗಳು ಅಥವಾ ಸವರ್ಣೀಯರು ಮೀಸಲಾತಿಯ ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ. ಇದೊಂದು ವಿಪರ್ಯಾಸವೇ ಸರಿ! ಸವರ್ಣೀಯರು ಬಡತನದಿಂದ ನಿರ್ಮೂಲನೆಗೊಳ್ಳಬಹುದು. ದಲಿತರಿಗೆ ಅಂಟಿಕೊಂಡಿರುವ ಕಳಂಕ ಅಷ್ಟು ವೇಗವಾಗಿ ಕಳಚಿಕೊಳ್ಳುವುದಿಲ್ಲ. ಮೀಸಲಾತಿಯನ್ನು ಪಡೆದುಕೊಳ್ಳಲು ಕೇವಲ ಭೌತಿಕ ದಾರಿದ್ರ್ಯವೊಂದನ್ನೇ ಮಾನದಂಡವಾಗಿಸಿಕೊಳ್ಳುವ ಮೂಲಕ ದಲಿತರಿಗೆ ನೀಡಲಾಗಿದ್ದ ಮೀಸಲಾತಿ ತಳಹದಿಯನ್ನೇ ದುರ್ಬಲಗೊಳಿಸಿದ್ದು ಮೇಲ್ವರ್ಗಗಳ ಕುತಂತ್ರವಾಗಿದೆ.

ಸಂವಿಧಾನದ ಅನುಚ್ಛೇದ 17ರ ಪ್ರಕಾರ ಅಸ್ಪೃಶ್ಯತೆಯನ್ನು ನಿರ್ಮೂಲನೆ ಮತ್ತು ನಿಷೇಧಿಸಿದೆ. ಆದರೆ 'ದೇಶದಲ್ಲಿ ಒಂದು ಹಳ್ಳಿಯೂ ಅಸ್ಪೃಶ್ಯ ಮುಕ್ತ, ಜಾತಿ ಮುಕ್ತ ಎಂದು ಘೋಷಣೆಯಾದ ಇತಿಹಾಸವಿಲ್ಲ'. ಇಂದಿಗೂ ಅಸ್ಪೃಶ್ಯತೆಯು ಹಲವು ರೂಪದಲ್ಲಿ ಕಂಡುಬರುತ್ತದೆ ಎನ್ನುವುದು ವಿಷಾದನೀಯ. ಅದಕ್ಕಾಗಿಯೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಸಮರ್ಥಿಸಿಕೊಳ್ಳಲಾಗುತ್ತದೆ. ಜಾತಿಯ ಪೂರ್ವಗ್ರಹಗಳಿಂದಾಗಿ ದಲಿತ ಸಮುದಾಯಗಳ ಪರವಾಗಿ ರೂಪಿಸಲಾಗುವ ಕಾರ್ಯಕ್ರಮಗಳಿಗೆ ತಡೆಯೊಡ್ಡುವ ಅಥವಾ ಮುಂದೂಡುವ ಸಾಧ್ಯತೆಯನ್ನು ಇಲ್ಲವಾಗಿಸುವ ಉದ್ದೇಶದಿಂದಲೇ ದಲಿತರಿಗೆ ಮೀಸಲಾತಿ ನೀಡಲಾಗಿದೆ. ದಲಿತ ಸಮುದಾಯಗಳಿಗೆ ಮೀಸಲಾತಿಯ ಲಾಭ ತಟ್ಟುವಂತಾಗಲಿ, ಜಾತಿಯ ಪೂರ್ವಗ್ರಹಗಳಿಂದ ಉಂಟಾಗಬಹುದಾದ ವಂಚನೆಗಳು ತಪ್ಪಬೇಕೆಂಬ ಮೂಲ ಉದ್ದೇಶದಿಂದಲೇ ಮೀಸಲಾತಿ ನೀಡಲಾಗಿದೆ. ಆದರೆ ದಲಿತನು ಬಡತನದಿಂದ ಪ್ರಸಕ್ತದಲ್ಲಿಯೂ ಬಳಲುತ್ತಿದ್ದಾನೆ ಎನ್ನುವುದು ಹಲವು ಅಂಕಿ–ಅಂಶಗಳಿಂದ ಕಂಡುಬರುತ್ತದೆ.

ಈ ವಿಶಾಲವಾದ ವಾಸ್ತವಿಕತೆಯ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡಾಗ ಈ ಮೇಲೆ ವಿಶ್ಲೇಷಿಸಿದ ಯಾವ ವಾಸ್ತವಿಕ ಅನಿವಾರ್ಯತೆಗಳ ಆಧಾರದ ಮೇಲೆ (EWS) ಆರ್ಥಿಕ ದುರ್ಬಲ ವರ್ಗಗಳಿಗೆ ಶೇ.10ರಷ್ಟು ಮೀಸಲಾತಿಯನ್ನು ನಿಗದಿ ಮಾಡಿದೆ? ಸಮಾಜದಲ್ಲಿರುವ ಯಾವ ಪೂರ್ವಗ್ರಹದ ಸ್ವರೂಪಗಳು ಈ ಮೀಸಲಾತಿಯನ್ನು ಕಡ್ಡಾಯ ಮಾಡುವಂತೆ ಮಾಡಿದವು? ಅಸ್ಪೃಶ್ಯತೆಯ ಆಚರಣೆಯಲ್ಲಿ ಒಂದು ಬಗೆಯ ತಾರತಮ್ಯ ಅಥವಾ ಅನ್ಯಾಯದ ಅಂಶಗಳು ಬೇರುಬಿಟ್ಟಿರುತ್ತವೆ. ಆದರೆ ಆರ್ಥಿಕ ಹಿಂದುಳಿದಿರುವಿಕೆಯ ಬೇರುಗಳು ಸವರ್ಣೀಯರಿಗೆ ಉದ್ಯೋಗಗಳನ್ನು ನೀಡಲಾಗದ ವ್ಯವಸ್ಥೆಯ ಅಸಮರ್ಥತೆಯಲ್ಲಿದೆಯೇ? ಉದ್ಯೋಗಾವಕಾಶಗಳು ಕೊರತೆಯುಂಟಾಗಿರುವುದು ಅಸ್ಪೃಶ್ಯತೆಯ ಕಾರಣದಿಂದಲ್ಲ; ಬದಲಿಗೆ ಪ್ರಭುತ್ವ ಮತ್ತು ಮಾರುಕಟ್ಟೆಯು ಅರ್ಹರಿಗೆ ಹಾಗೂ ಅಗತ್ಯವಿರುವವರಿಗೆ ಸಾಕಷ್ಟು ಉದ್ಯೋಗಗಳನ್ನು ನೀಡಲು ಅಸಮರ್ಥವಾಗಿರುವುದರಿಂದ ಲಭ್ಯವಾಗುತ್ತಿಲ್ಲ. ಸಂವಿಧಾನದಲ್ಲಿರುವ ಹಲವಾರು ಪರಿಚ್ಛೇಧಗಳು ಮತ್ತು ಕಂಡಿಕೆಗಳು ದಲಿತ

ಸಮುದಾಯಕ್ಕೆ ನೀಡಲಾಗಿರುವ ಮೀಸಲಾತಿಯನ್ನು ಆ ಸಮುದಾಯಗಳು ಅನುಭವಿಸುತ್ತಿರುವ ಸಾಮಾಜಿಕ ಅವಮಾನಗಳು ಮತ್ತು ಅಸಮಾನತೆಗಳು ಆಧರಿಸಿ ವರ್ಗೀಕರಣ ಮಾಡಿದೆಯೇ ಹೊರತು ಮೇಲ್ವರ್ಗದ ಮೀಸಲಾತಿಯಲ್ಲಿ ಕೈಗೊಂಡಿರುವ ಆರ್ಥಿಕ ದುರ್ಬಲ ಮಾನದಂಡ ಆಧಾರವಲ್ಲ. ಆರ್ಥಿಕ ಮತ್ತು ಸಾಮಾಜಿಕ ಮೀಸಲಾತಿಗಳ ಮಧ್ಯೆ ಮತ್ತೊಂದು ಸಮಸ್ಯೆ ಎಂದರೆ, ಖಾಸಗೀಕರಣ. ಇಂದು ಬಹುತೇಕ ಸರ್ಕಾರಿ ವಲಯಗಳು ಖಾಸಗಿ ಅವರ ಪಾಲಾಗಿವೆ. ಖಾಸಗೀಕರಣ ವ್ಯವಸ್ಥೆಯಲ್ಲಿ ಮೀಸಲಾತಿ ಪರಿಕಲ್ಪನೆಯೇ ಇಲ್ಲ. ಸಾರ್ವಜನಿಕ ವಲಯದಲ್ಲಿ ಮಾತ್ರ ಮೀಸಲಾತಿ ಇದೆ. ಖಾಸಗೀಕರಣದ ಪ್ರವೇಶಿಕೆಯಿಂದಾಗಿ ಮೀಸಲಾತಿಯ ಅವಕಾಶಗಳು ಸಂಪೂರ್ಣವಾಗಿ ಕಡಿಮೆಯಾಗ ತೊಡಗಿವೆ. ಮತ್ತೊಂದೆಡೆ ಮೀಸಲಾತಿಯ ಮೇಲೆ ಅವಲಂಬನೆಯಾಗುತ್ತಿರುವ ಸಂಖ್ಯೆ ಹೆಚ್ಚಳವಾಗುತ್ತಿದೆ. ಈ ಸಂದರ್ಭದಲ್ಲಿ ಕೆಲವು ಸಂಘಟನೆಗಳು ಉದ್ದೇಶಪೂರ್ವಕವಾಗಿಯೇ ಮೀಸಲಾತಿಯನ್ನು ಅಪವ್ಯಾಖ್ಯಾನಗೊಳಿಸಿ ಬಿತ್ತರಿಸುತ್ತಿದ್ದಾರೆ ಎನ್ನುವ ಕೌತುಕ ಘಟ್ಟವನ್ನು ದಲಿತರು ಇದ್ದಾರೆ.

**ದಲಿತರ ಸವಾಲುಗಳೇನು?**

ಈ ದೇಶದ ಸಂವಿಧಾನದ ಪೀಠಿಕೆಯಲ್ಲಿ ದಾಖಲಾದಂತೆ, ಸಂವಿಧಾನದ ಮೂಲ ಆಶಯ ಜಾತ್ಯತೀತ ದೇಶವನ್ನು ನಿರ್ಮಿಸುವುದಾಗಿದೆ. ಅಸ್ಪೃಶ್ಯರು ಮತ್ತು ಹಿಂದುಳಿದ ಜನರನ್ನು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಿ, ಸವರ್ಣೀಯರೊಂದಿಗೆ ಸಮಾನತೆಯ ಮತ್ತು ಘನತೆಯ ಜೀವನ ಕಟ್ಟಿಕೊಡುವುದೇ ಆಗಿದೆ. ಆದರೆ ವಿಪರ್ಯಾಸ, ಸವರ್ಣೀಯರು ಸಹ ಮೀಸಲಾತಿ ಪಡೆದಿರುವುದರಿಂದ ಅವರೊಂದಿಗೆ ಸಮಾನತೆ ಸಾಧಿಸಲು ಸಾಧ್ಯವೇ ಎನ್ನುವ ಮೂಲ ಪ್ರಶ್ನೆ? ಈ ಮೀಸಲಾತಿಯು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ ಎನ್ನುವುದು ಸ್ಪಷ್ಟ. 'ಆರ್ಥಿಕ ದುರ್ಬಲ ವರ್ಗಗಳಿಗೆ ಮೀಸಲಾತಿ ನೀಡುವುದರಿಂದ ಜಾತಿ ಪದ್ಧತಿಯನ್ನು ಇನ್ನೂ ಭದ್ರವಾಗಿ ಮುಂದುವರೆದುಕೊಂಡು ಹೋಗುವುದಕ್ಕೆ ಸಹಕರಿಸುತ್ತದೆ'. 'ಆರ್ಥಿಕ ಆಧಾರದ ಮೀಸಲಾತಿಯು ಸಾಮಾಜಿಕ ತಾರತಮ್ಯವನ್ನು ಬಯಸುತ್ತದೆ'. ಸಾಮಾಜಿಕ ಮತ್ತು ಶೈಕ್ಷಣಿಕ ಬುನಾದಿಯ ಮೇಲೆ ನೀಡಿದ ಮೀಸಲಾತಿಯು ಸಾಮಾಜಿಕ ಪ್ರಗತಿಯನ್ನು ಬಯಸುತ್ತದೆ ಮತ್ತು ಬಡತವನ್ನೇ ಅಲ್ಲಾಡಿಸುತ್ತದೆ. ಮೀಸಲಾತಿಯ ವ್ಯಾಖ್ಯಾನವನ್ನು ಅಪಭ್ರಂಶಗೊಳಿಸಿದ್ದರಿಂದ ಅದನ್ನು ವ್ಯಾಖ್ಯಾನಿಸಲು ಕಷ್ಟವಾಗುತ್ತಿದೆ. ಹಿಂದುಳಿದ, ಪರಿಶಿಷ್ಠ ಸಮುದಾಯಗಳು ಸಾಮಾಜಿಕ ನ್ಯಾಯ ಸಮಾನತೆಯ ಕನಸನ್ನು ಆರ್ಥಿಕ ದುರ್ಬಲ ವರ್ಗಗಳ ಮೀಸಲಾತಿಯು ಭಗ್ನಗೊಳಿಸುತ್ತದೆ ಇಂದು ಸಾರ್ವಜನಿಕ ವಲಯಗಳು ಚಿಕ್ಕದಾಗುತ್ತಾ ಸಾಗಿವೆ. ಉದ್ಯೋಗಗಳ ಸೃಷ್ಟಿಯ ಪ್ರಮಾಣವು ಇಳಿಕೆಯಲ್ಲಿರುವುದು ಕಂಡುಬರುತ್ತದೆ. ಇಂಥ ಸಂದರ್ಭದಲ್ಲಿ ಆರ್ಥಿಕ ದುರ್ಬಲ ವರ್ಗದ ಮೀಸಲಾತಿಯು ಎಸ್ಸಿ/ಎಸ್ಟಿ ಸಮುದಾಯಕ್ಕೆ ಲಭಿಸಬೇಕಿದ್ದ ಉದ್ಯೋಗಗಳ ಪ್ರಮಾಣವನ್ನು ಕುಗ್ಗಿಸುತ್ತದೆ. ಮೀಸಲಾತಿಯ ಉದ್ದೇಶಗಳನ್ನು ಅಪವ್ಯಾಖ್ಯಾನಿಸಿ ಗೊಂದಲಗಳನ್ನು ಸೃಷ್ಟಿಸುವ ಮೂಲ ಉದ್ದೇಶ ಇದರದ್ದಾಗಿದೆ ಎನ್ನುವಂತೆ EWS ಬಿಂಬಿತವಾಗುತ್ತಿದೆ. ಜಾತಿ ವ್ಯವಸ್ಥೆ ಇರುವವರೆಗೂ ಮೀಸಲಾತಿ ಇದ್ದೇ ಇರುತ್ತದೆ ಎಂದು ನಂಬಲಾಗಿತ್ತು. ಆದರೆ ಮೇಲ್ವರ್ಗದ ಸಮುದಾಯಕ್ಕೂ ಮೀಸಲಾತಿ ಲಭಿಸಿದಾಗ ಮೀಸಲಾತಿ ಕುರಿತು ಹೊಸ ಅಧ್ಯಯನ ಮಾಡುವುದು ಮತ್ತು ವ್ಯಾಖ್ಯಾನಿಸುವುದು ಸೂಕ್ತ ಎನ್ನುವ ಅಭಿಪ್ರಾಯ.

**ಉದ್ಯೋಗಾವಕಾಶಗಳು ಎಲ್ಲಿವೆ?**

"ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ"–CMIE ಸಂಸ್ಥೆಯ ವರದಿಯ ಪ್ರಕಾರ ಭಾರತದ ಉದ್ಯೋಗ ಮಾರುಕಟ್ಟೆಯ ಪರಿಸ್ಥಿತಿ ನಿರಾಶಾದಾಯಕವಾಗಿದೆ.

ಮೊದಲನೆಯದಾಗಿ 2022ರ ಡಿಸೆಂಬರ್ 16 ವೇಳೆಗೆ ಭಾರತದ ನಿರುದ್ಯೋಗ ದರವು ಶೇ.9.3ಕ್ಕೇರಿದ್ದು ಕಂಡುಬರುತ್ತದೆ. ಎರಡು ವರ್ಷದಲ್ಲಿಯೇ ಅತಿ ಹೆಚ್ಚಿನ ಮಟ್ಟವನ್ನು ತಲುಪಿದೆ. ಎರಡನೆಯದಾಗಿ 2017 ಮತ್ತು 2018ರಲ್ಲಿ ಸುಮಾರು 1.1 ಕೋಟಿಯಷ್ಟು ಜನರು ಉದ್ಯೋಗವನ್ನು ಕಳೆದುಕೊಂಡ ನಿರುದ್ಯೋಗಿ ಪಡೆಯಲ್ಲಿ ಸೇರಿಕೊಂಡಿದ್ದಾರೆ. ಮೂರನೆಯದಾಗಿ ನಿರುದ್ಯೋಗದ ಪ್ರಮಾಣವು ಆರ್ಥಿಕವಾಗಿ ತ್ರಾಣರಹಿತವಾಗುತ್ತಿರುವ ಕ್ಷೇತ್ರ ಮತ್ತು ಸಮುದಾಯಗಳಲ್ಲಿ ಹೆಚ್ಚಾಗಿದೆ. ಉದಾಹರಣೆಗೆ ಈಗಾಗಲೇ ಕೃಷಿ ಬಿಕ್ಕಟ್ಟನ್ನು ಎದುರಿಸುತ್ತಿರುವ ಗ್ರಾಮೀಣ ಕ್ಷೇತ್ರದಲ್ಲಿ ಶೇ.82%ರಷ್ಟು ಉದ್ಯೋಗಗಳು ನಷ್ಟವಾಗಿವೆ. ಮತ್ತು ನಿರುದ್ಯೋಗದ ಶೇ.80ರಷ್ಟು ಹೊರೆಯನ್ನು ಮಹಿಳೆಯರೇ ಹೊರುತ್ತಿದ್ದಾರೆ. CMIE ಸಂಸ್ಥೆಯು ತನ್ನ ಅಂಕಿ–ಅಂಶಗಳು ತಾತ್ಕಾಲಿವಾದದ್ದೆಂದು ಹೇಳಿದ್ದರೂ ಸಹ ಅಂತಿಮ ವರದಿಯಲ್ಲೂ ದೇಶದ ಒಟ್ಟಾರೆ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿರಲು ಸಾಧ್ಯವಿಲ್ಲ ಎಂದು ಪ್ರಸ್ತುತಪಡಿಸಿದೆ. ಸರ್ಕಾರಿ ಕ್ಷೇತ್ರದಲ್ಲಿನ ನೇಮಕಾತಿ ಆಮೆಗತಿಯಲ್ಲಿದೆ; ಅಷ್ಟೇ ಅಲ್ಲದೆ ಭರ್ತಿಯಾಗದೆ ಉಳಿದುಕೊಂಡಿರುವ ಬ್ಯಾಕ್‌ಲಾಗ್ ಹುದ್ದೆಗಳ ಮೂರನೇ ಒಂದು ಭಾಗದಷ್ಟು ಮೀಸಲುವರ್ಗಕ್ಕೆ ಸೇರಿದವುಗಳಾಗಿವೆ. ಅದೇ ಸಮಯದಲ್ಲಿ ಉದ್ಯೋಗಾವಕಾಶಗಳ ಪ್ರಮುಖ ಮೂಲವಾಗಿದ್ದ ಅಸಂಘಟಿತ ಮತ್ತು ಅನೌಪಚಾರಿಕ ಕ್ಷೇತ್ರಗಳು ನೋಟು ನಿಷೇಧ ಮತ್ತು GSTಯೆಂಬ ಅವಳಿ ಸರ್ಜಿಕಲ್ ದಾಳಿಗೆ ಸಿಲುಕಿ ತತ್ತರಿಸಿದ್ದು ಇನ್ನೂ ಚೇತರಿಸಿಕೊಂಡಿಲ್ಲ. ಇಂಥ ಸಂದರ್ಭದಲ್ಲಿ ಮೀಸಲಾತಿಯು ಶೇ.50%ರ ಮಿತಿಯನ್ನು ಮೀರಬಾರದೆನ್ನುವ ಸುಪ್ರೀಂ ಕೋರ್ಟಿನ ನಿರ್ದೇಶನಗಳನ್ನು ಉಲ್ಲಂಘಿಸಲಾಗಿದೆ. ಸಮಾಜದಲ್ಲಿ ಜಾತಿ ವ್ಯವಸ್ಥೆ ಇರುವವರೆಗೂ ಮೀಸಲಾತಿ ಇರಬೇಕೆಂದು ಬಲಿತ ದಲಿತರು ವಾದಿಸುತ್ತಿಲ್ಲ. ಮೀಸಲಾತಿಯಿಂದ ಹುಟ್ಟಿಕೊಂಡ ಬಲಿತ ದಲಿತರು ಮೀಸಲಾತಿಯ ಪರವಾಗಿ ಧ್ವನಿ ಎತ್ತುತ್ತಿಲ್ಲ. ಮೀಸಲಾತಿಯ ವಿರುದ್ಧ ಮೇಲ್ವರ್ಗದ ಜನರು ಷಡ್ಯಂತರ ಮಾಡುತ್ತಲೇ ಬರುತ್ತಿದ್ದಾರೆ. ಮೀಸಲಾತಿ ಎನ್ನುವುದು ಬಡತನ ನಿರ್ಮೂಲನಾ ಕಾರ್ಯಕ್ರಮವಲ್ಲ. ಸಮಾಜದ ಹಕ್ಕುಗಳ ವಂಚಿತರಿಗೆ ನೀಡಿದ ಪ್ರಾತಿನಿಧ್ಯವಾಗಿದೆ. 'ಆರ್ಥಿಕ ಸಬಲೀಕರಣಕ್ಕೆ ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಶಕ್ತಿ ಇಲ್ಲ'. ದಲಿತರು ದೇಶದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಅಂಶಗಳು ಪರಿವರ್ತನೆಗೊಂಡರೆ ಮಾತ್ರ ವಿಮೋಚನೆಗೊಳ್ಳುತ್ತಾರೆ.

**ಜಾಗತೀಕರಣ ಮತ್ತು ಮೀಸಲಾತಿ**

ಜಾಗತೀಕರಣವು ದಲಿತರಿಗೆ ನೀಡಿದ ಮೀಸಲಾತಿಯ ಕ್ರಮಗಳ ಮಿತಿಯನ್ನು ಗುರುತಿಸಲಾಗುತ್ತಿದೆ. ದಲಿತರು ಮೀಸಲಾತಿಯ ಸಹಾಯದೊಂದಿಗೆ ಜಾಗತೀಕರಣಕ್ಕೆ ಹೊಂದಿಕೊಳ್ಳು ತ್ತಿರುವುದು ಕಂಡುಬರುತ್ತದೆ. ಸಮಾನ ಹಕ್ಕುಗಳು, ಆರ್ಥಿಕ ಪ್ರಗತಿ, ರಾಜಕೀಯ ಅಧಿಕಾರ ಮತ್ತು ಸಂಸ್ಕೃತಿ ಬೆಳವಣಿಗೆಗೆ ಶೇ.17%ರಷ್ಟು ಮೀಸಲಾತಿ ಪುಷ್ಟಿ ನೀಡುತ್ತಿರುವುದು. ಆದರೆ ಜಾಗತೀಕರಣದ ಸಂದರ್ಭದಲ್ಲಿ ಸರ್ಕಾರಿ ವಲಯಗಳು ಖಾಸಗೀಕರಣಕ್ಕೆ ಒತ್ತು ನೀಡುತ್ತಿರುವುದರಿಂದ ದಲಿತರ ಸುರಕ್ಷತೆಗೆ ದೊಡ್ಡ ಪೆಟ್ಟು ಬೀಳುತ್ತಿದೆ. ಜಾಗತೀಕರಣದ ಪ್ರಭಾವಕ್ಕೆ ಒಳಗಾದ ನಮ್ಮ ದೇಶದ ಜನರ ಮನಸ್ಥಿತಿ ಮೀಸಲಾತಿಯ ಬಗ್ಗೆ ಇದ್ದ ಅದುವರೆಗಿನ ಪರಿಕಲ್ಪನೆಯನ್ನು ಬದಲಾಯಿಸಿಕೊಳ್ಳುತ್ತಿದ್ದಾರೆ. ಮೀಸಲಾತಿ ಇಲ್ಲದೆ ದಲಿತರು ಜೀವನವನ್ನು ಕಟ್ಟಿಕೊಳ್ಳುತ್ತಾರೆ ಎನ್ನುವ ಹುಸಿ ನಂಬಿಕೆಯನ್ನು ಸಮಾಜದಲ್ಲಿ ಬಿತ್ತುತ್ತಿದ್ದಾರೆ. ಮತ್ತೊಂದೆಡೆ ಮೀಸಲಾತಿ ಪಡೆಯುತ್ತಿರುವವರ ಬಗ್ಗೆ ಕೀಳು ಮನೋಭಾವನೆ ಹುಟ್ಟುವಂತೆ ಪ್ರಚೋದಿಸುತ್ತಿದ್ದಾರೆ. ಮಗದೊಂದು ಕಡೆ ಮೀಸಲಾತಿ ಒಳಗೊಂಡ ಸರ್ಕಾರಿ ವಲಯದ ವಿಸ್ತಾರತೆಯ ಬಾಹು ಕಡಿಮೆಗೊಳಿಸಲಾಗುತ್ತಿದೆ. ಆರ್ಥಿಕ ದುರ್ಬಲ ವರ್ಗದವರಿಗೂ ಮೀಸಲಾತಿ ಅನಿವಾರ್ಯವಾಗಿದೆ

ಎನ್ನುವ ಮನೋಭಾವನೆ ಸಮಾಜದಲ್ಲಿ ಸೃಷ್ಟಿಸಲಾಗುತ್ತಿದೆ. ಸಮಾಜದ ಎಲ್ಲ ವರ್ಗದ ಜನರಿಗೂ ಮೀಸಲಾತಿ ಅವಶ್ಯಕ ಮತ್ತು ಅನಿವಾರ್ಯವಾಗಿದೆ ಎನ್ನುವ ಮಟ್ಟಿಗೆ ಮೀಸಲಾತಿಯನ್ನು ಅಪವ್ಯಾಖ್ಯಾನ ಮಾಡಿದ್ದಾರೆ. ಮೀಸಲಾತಿಗೆ ನೀಡಬೇಕಾಗಿದ್ದ ಆಧಾರದ ಆಯಾಮಗಳನ್ನು ಬದಲಿಸಿ, ಮೀಸಲಾತಿಯ ಗಂಭೀರತೆಯನ್ನು ಸಡಿಲಗೊಳಿಸಿದ್ದಾರೆ.

ಆದರೆ ಸರ್ಕಾರಿ ಉದ್ಯಮ ಸಂಸ್ಥೆಗಳ ಸಮೀಕ್ಷೆ ವರದಿಗಳ ಪ್ರಕಾರ, 2013–14 ರಿಂದ 2021–22 ಒಳಗೆ 2.28 ಲಕ್ಷದಷ್ಟು ಜನರು ತಮ್ಮ ಉದ್ಯೋಗವನ್ನು ಕಳೆದುಕೊಂಡಿದ್ದಾರೆ. ಅದರಲ್ಲಿ ಸಿಂಹ ಪಾಲು ದಲಿತರದ್ದೇ ಆಗಿದೆ. ಸರ್ಕಾರದ ಉದ್ದಿಮೆ ಸಂಸ್ಥೆಗಳಲ್ಲಿ ಇದ್ದ ದಲಿತ ನೌಕರರ ಸಂಖ್ಯೆ 2013–14ರಲ್ಲಿ 5.60 ಲಕ್ಷ ಇದ್ದದ್ದು, 2021–22ರ ವೇಳೆಗೆ 4.20 ಲಕ್ಷಕ್ಕೆ ಕುಸಿದಿದೆ. ಅಂದರೆ 1.40ಲಕ್ಷ ದಲಿತರು ಮತ್ತು ಹಿಂದುಳಿದವರು ಸರ್ಕಾರಿ ಉದ್ಯೋಗಗಳನ್ನು ಕಳೆದುಕೊಂಡಿದ್ದಾರೆ ಎನ್ನುವುದು ವರದಿಯಿಂದ ಹೊರ ಬರುತ್ತದೆ. ಆದರೆ ಅಘಾತಕಾರಿ ಮತ್ತೊಂದು ವಿಷಯ ಎಂದರೆ, ಗುತ್ತಿಗೆ ನೌಕರರ ಸಂಖ್ಯೆ ಹೆಚ್ಚಾಗುತ್ತಿದೆ. ಗುತ್ತಿಗೆ ಆಧಾರದ ಉದ್ಯೋಗಗಳಲ್ಲಿ ಮೀಸಲಾತಿ ಪರಿಕಲ್ಪನೆಯೇ ಇಲ್ಲ. ಇಲ್ಲಿ ದಲಿತ ಉದ್ಯೋಗಿಗಳ ಸಾದೃಶ್ಯತೆ ಕಂಡು ಬರುತ್ತಿದೆ. ಅಂದರೆ ದಲಿತರನ್ನು ವ್ಯವಸ್ಥಿತವಾಗಿಯೇ ಸರ್ಕಾರಿ ಉದ್ಯೋಗಗಳಿಂದ ದೂರ ಇಡುತ್ತಿರುವುದು ನೈಜ ಅಂಶವಾಗಿದೆ. ದಲಿತರ ಪ್ರಗತಿಯ ಹೃದಯ ಮೀಸಲಾತಿ ಎನ್ನುವುದನ್ನು ಅರಿತ ಬ್ರಾಹ್ಮಣಿಸಂ ಅದರ ನಿರ್ಮೂಲನೆ ಮತ್ತು ಅಪಭ್ರಂಶಕ್ಕೆ ಪ್ರಯತ್ನ ಪಡುತ್ತಿದೆ.

**ಉಪಸಂಹಾರ ಮತ್ತು ಸಲಹೆಗಳು**

ಲೇಖನವು ಆರ್ಥಿಕ ಹಿಂದುಳಿದವರಿಗೆ ನೀಡಿದ ಮೀಸಲಾತಿಯನ್ನು ಕುರಿತು ಚರ್ಚಿಸುವುದರೊಂದಿಗೆ ದಲಿತರಿಗೆ ನೀಡಿದ ಮೀಸಲಾತಿಯ ಮೇಲಾಗುವ ಪರಿಣಾಮವನ್ನು ಅವಲೋಕಿಸುತ್ತದೆ. ಇಲ್ಲಿಯ ಪ್ರಮುಖ ಸಮಸ್ಯೆ ಸವರ್ಣೀಯರಿಂದ ದೌರ್ಜನಕ್ಕೆ ಒಳಗಾಗಿ ಶೈಕ್ಷಣಿಕ ಧಾರ್ಮಿಕ ಸಾಮಾಜಿಕವಾಗಿ ವಂಚಿತಗೊಂಡ ಸಮುದಾಯಕ್ಕೆ ಮೀಸಲಾತಿ ನೀಡಲಾಗಿದೆ. ಅದು ಮೂಲಭೂತವು ಹೌದು. ಪ್ರಸಕ್ತದಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆಸಿದ ಸವರ್ಣೀಯರೇ ಮೀಸಲಾತಿ ಗಿಟ್ಟಿಸಿಕೊಂಡಿರುವುದೇ ಒಂದು ದುರಂತ. ಅಸ್ಪೃಶ್ಯರಿಗೆ ಮತ್ತು ಹಿಂದುಳಿದ ಜನಾಂಗಕ್ಕೆ ಯಾವ ಆಯಾಮದ ಆಧಾರದ ಮೇಲೆ ಮೀಸಲಾತಿ ನೀಡಲಾಗಿತ್ತು ಎನ್ನುವುದು ಮರುಪರಿಶೀಲನೆಗೆ ಒಳಪಡಿಸುವ ಜರೂರತ್ತಲ್ಲಿ ನಾವಿದ್ದೇವೆ. ಕಾರಣ ದೌರ್ಜನ್ಯ ಮತ್ತು ಅಸ್ಪೃಶ್ಯದಂತ ಘನ ಘೋರ ಕೃತ್ಯಗಳನ್ನು ಅನುಭವಿಸಿದ್ದಕ್ಕಾಗಿ ಮೀಸಲಾತಿ ನೀಡಲಾಗಿದೆ ಎನ್ನುವ ಪರಿಕಲ್ಪನೆ. ಅಸ್ಪೃಶ್ಯರಿಗೆ ಘನತೆಯ ಜೀವನವನ್ನು ಕಟ್ಟಿಕೊಳ್ಳುವುದಕ್ಕಾಗಿ ಮೀಸಲಾತಿ ನೀಡಲಾಗಿದೆ ಎನ್ನುವುದು ನಮ್ಮ ಮನೋಭಾವನೆಗೆ ನಿಲುಕುವಂಥದ್ದು. ಯಾರ ವಿರುದ್ಧ ದಲಿತರು ಅನುಭವಿಸಿದ ಯಾತನೆಗಾಗಿ ಮೀಸಲಾತಿ ಪಡೆದುಕೊಂಡಿದ್ದರೋ ಇಂದು ಅವರೇ ಮೀಸಲಾತಿ ಪಡೆದುಕೊಂಡಿದ್ದಾರೆ ಎನ್ನುವುದು ದೊಡ್ಡ ಸವಲಾಗಿದೆ. ಮೀಸಲಾತಿಗೆ ಇದ್ದ ಮೂಲ ಪರಿಕಲ್ಪನೆ ಇಲ್ಲಿ ತಿರುಚಲಾಗಿದೆ. ಯಾವ ಕಾರಣದಿಂದಾಗಿ, ದಲಿತರಿಗೆ ಮೀಸಲಾತಿ ನೀಡಲಾಗಿತ್ತೋ ಆ ಕಾರಣವೇ ಇಲ್ಲದಂತಾಗಿಸಿ ಮೀಸಲಾತಿ ಮುಗಿಸೋಕೆ ಬ್ರಾಹ್ಮಣಿಸಂ ಹೊಂಚು ಹಾಕಿದೆ. ಆರ್ಥಿಕ ಹಿಂದುಳಿದ ಅಥವಾ ದುರ್ಬಲರಿಗೆ ನೀಡಿದ ಮೀಸಲಾತಿಯ ಉದ್ದೇಶ ಸವರ್ಣೀಯರಿಂದ ದಲಿತರ ಮೇಲೆ ಯಾವುದೇ ದೌರ್ಜನ್ಯ ಹಾಗೂ ಅವಕಾಶ ವಂಚಿತ ನಡೆದಿರುವುದಿಲ್ಲ ಎನ್ನುವುದು ಭವಿಷ್ಯದಲ್ಲಿ ಬಿಂಬಿಸುವುದು. ಮತ್ತೊಂದು ಸಂವಿಧಾನದಲ್ಲಿ ದಾಖಲಿಸಿದಂತೆ ಸಾಮಾಜಿಕ ಶೈಕ್ಷಣಿಕ ಮತ್ತು ರಾಜಕೀಯವಾಗಿ ಹಿಂದುಳಿದ ಆಧಾರದ ಮೇಲೆ ನೀಡಿದ ಮೀಸಲಾತಿಯನ್ನು ಹುಸಿಗೊಳಿಸುವುದು. ದೇಶದ ಎಲ್ಲ ವರ್ಗಗಳಿಗೂ ಮತ್ತು ಜಾತಿಗಳಿಗೂ

ಮೀಸಲಾತಿಯನ್ನು ನೀಡುವುದರೊಂದಿಗೆ ಜಾತ್ಯತೀತತೆ ಎನ್ನುವ ಪರಿಕಲ್ಪನೆಗೆ ಪೆಟ್ಟು ನೀಡುವುದು ಹಾಗೂ ಜಾತಿ ಪದ್ಧತಿಯನ್ನು ಶಾಶ್ವತಗೊಳಿಸುವುದಾಗಿದೆ. ದೇಶದಲ್ಲಿರುವ ಪ್ರತಿಯೊಂದು ಗುಂಪು, ಜಾತಿ, ಧರ್ಮಗಳು ಮೀಸಲಾತಿಯ ಫಲವನ್ನು ಪಡೆದಿದ್ದರೂ ಸಹ ಮೀಸಲಾತಿ ಕುರಿತು ಸಂತೃಪ್ತ ಮನೋಭಾವನೆ ಹೊಂದುತ್ತಿಲ್ಲ. ಇನ್ನೂ ಹೆಚ್ಚು ಹೆಚ್ಚು ಮೀಸಲಾತಿ ಅವಶ್ಯಕತೆ ಇದೆ ಎನ್ನುವ ರೀತಿಯಲ್ಲಿ ಹಲಬುತ್ತಿದ್ದಾರೆ. ಇದಕ್ಕೆ ಹಲವಾರು ರಾಜಕೀಯ ಪಕ್ಷಗಳು ಪುಷ್ಠಿಕರಿಸುತ್ತಿವೆ. ಮೀಸಲಾತಿಯ ವಿಷಯದಲ್ಲಿ ಗೊಂದಲಗಳನ್ನು ಸೃಷ್ಟಿಸುತ್ತಾ ಅದರ ಪ್ರಖರತೆ ಕಡಿಮೆಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ಇಂಥ ಸಮಸ್ಯೆಗಳಿಂದ ವಿಮೋಚನೆ ಪಡೆಯಲು ಕೆಲವು ಸಲಹೆಗಳನ್ನು ಅನುಸರಿಸುವುದು ಸೂಕ್ತ.

ಹಿಂದುಳಿದ ವರ್ಗಗಳು ಕಾನೂನುಗಳನ್ನು ರೂಪಿಸುವ ಅಧಿಕಾರವನ್ನು ಪಡೆಯಬೇಕು. ದಲಿತ ಡಾಂಭಿಕ ಅಂಬೇಡ್ಕರ್‌ವಾದಿ ರಾಜಕಾರಣಿಗಳನ್ನು ತಿರಸ್ಕರಿಸಬೇಕು ಮತ್ತು ಅಧಿಕಾರವನ್ನು ಪಡೆಯದಂತೆ ತಡೆಯಬೇಕು. ಅಂತರ್ಜಾತಿಯ ವಿವಾಹಗಳನ್ನು ಪ್ರೋತ್ಸಾಹಿಸಬೇಕು ಮತ್ತು ಕಡ್ಡಾಯಗೊಳಿಸಬೇಕು. ಪ್ರಜಾಪ್ರಭುತ್ವದ ಗುಟ್ಟು ಜನಸಮುದಾಯದ ಸಂಘಟನೆಯಲ್ಲಿದೆ(ಒಗ್ಗಟ್ಟಿನಲ್ಲಿದೆ). ಆದ್ದರಿಂದ ಹಿಂದುಳಿದ ಮತ್ತು ಎಸ್ಸಿ/ಎಸ್ಟಿ ಸಮುದಾಯಗಳು ಒಗ್ಗಟ್ಟಾಗಿ ಅಧಿಕಾರವನ್ನು ಪಡೆಯಬೇಕು. ದೇಶದ ಸಂಪತ್ತು ಸಮಾನತೆಯ ಆಧಾರದ ಮೇಲೆ ಮರುಹಂಚಿಕೆಯಾಗಬೇಕು. ಖಾಸಗೀಕರಣದ ಉದ್ಯೋಗದಲ್ಲಿ ಮೀಸಲಾತಿ ಪಡೆದುಕೊಳ್ಳುವ ಕಾಲಘಟ್ಟದಲ್ಲಿ ನಾವಿದ್ದೇವೆ. ದೇಶದ ಭೂಮಿ ಮತ್ತು ಬೃಹತ್ ಕೈಗಾರಿಕೆಗಳು ರಾಷ್ಟ್ರೀಕರಣಗೊಳ್ಳಬೇಕು. ಆಗ ಮಾತ್ರ ದೇಶದಲ್ಲಿ ಸಮಾನತೆಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ. ಹಿಂದೂ ಧರ್ಮದ ಶೃಂಖಲೆಗಳಿಂದ ವಿಮೋಚನೆ ಪಡೆಯಬೇಕು. ದಲಿತರ ವಿಮೋಚನೆ ಬುದ್ಧನಲ್ಲಿದೆ.

**ಪರಾಮರ್ಶನ/ಆಧಾರ ಗ್ರಂಥಗಳು**


- *ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರೆಹ ಮತ್ತು ಬಾಷಣಗಳು.* (2021). ಕನ್ನಡ ಸಂಸ್ಕೃತಿ ಇಲಾಖೆ.
- ಗೋಪಿನಾಥ, ಎಂ. (2021). *ಒಳಮೀಸಲಾತಿ.* ಕೌನ್ಸಿಲ ಆಫ್ ಇಂಡಿಜೀನಸ್ ಪೀಪಲ್ಸ್ ಇಂಡಿಯಾ.
- ನಾಗಮೋಹನದಾಸ್ ಹೆಚ್.ಎನ್. (2022). *ಮೀಸಲಾತಿ ಭ್ರಮೆ ಮತ್ತು ವಾಸ್ತವ.* ಜನ ಪ್ರಕಾಶನ.
- ಪ್ರಜಾವಾಣಿ ದಿನ ಪತ್ರಿಕೆ, (2022, ಜೂನ್ 200). *ಗುತ್ತಿಗೆ ಆದ್ಯತೆ, ದಲಿತ ನೌಕರಿಗೆ ಕತ್ತರಿ.*
- ಪ್ರಜಾವಾಣಿ ದಿನಪತ್ರಿಕೆ, (2022, ಜೂನ್ 30). *ಇಡಬ್ಲ್ಯುಎಸ್ ತೀರ್ಪು ಭಿನ್ನ ನಿಲುವಿನ ಸಮರ್ಥನೆಗಳೇನು?.* ಪು.ಸಂ.07.
- ಶ್ರೀನಿವಾಸ ಮರಡಿ, ವೆಂಕಟೇಶ ಬೇವಿನ ಬೆಂಚಿ, ನರಸಿಂಹ ಗುಂಜಳ್ಳಿ ಮತ್ತು ರಮೇಶ ಅರೋಲಿ. (2014). *ಒಳ ಮೀಸಲಾತಿ ಮುಟ್ಟಲಾರದವನ ಒಡಲಾಳ.* ಲಡಾಯಿಪ್ರಕಾಶನ.
- ಸಂಜೀವಕುಮಾರ ಮು. ಪೋತೆ. (2018). *ಮೀಸಲಾತಿ ಮತ್ತು ಆರ್ಥಿಕಾಭಿವೃದ್ಧಿ.* ಪೃಥ್ವಿ ಪ್ರಕಾಶನ.
- Ghosh, A. K. (2022, November 24). The new Economically Weaker Sections (EWS) Quota: The changing idea of affirmative action. *ORF*.
- OFFICE MEMORANDUM. No.36039/1/2019-Estt (Res). (2019, January 30). Ministry of Personnel, Public Grievances & Pensions Department of Personnel & Training.